# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

# कर्नाटक–संस्कृत–विश्वविद्यालय:

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೩೦.೦೬.೨೦೧೫ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೨೭ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೭ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜೂನ್ ೩೦, ೨೦೧೫ರ ಮಂಗಳವಾರ ಬೆಳಿಗ್ಗೆ ೧೧.೩೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಕೆ.ಇ. ರಾಧಾಕೃಷ್ಣ,** ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. | **ಶ್ರೀ ಕೆ. ಭೀಮಪ್ಪ,** ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೫. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೬. | **ಡಾ. ಮೈಕೆಲ್,** ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೭. | **ಶ್ರೀಮತಿ ಜಯಶ್ರೀ ವಿ. ಕೊರತಿ,** ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೮. | **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೯. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೧೦. | **ಶ್ರೀ ಮತ್ತೀಗೌಡ ಸಿ.,** ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| ೧೧. | **ಪ್ರೊ. ಶ್ರೀನಿವಾಸ ವರಖೇಡಿ,** ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ಕ್ರ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಾಸನ ಸಮಿತಿ 26ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 26ನೇ ಸಭೆಯು ದಿನಾಂಕ: 30.05.2015ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ಅನುಪಾಲನಾ ವರದಿಯ ಎಲ್ಲಾ ಅಂಶಗಳ ಬಗೆಗೆ ಚರ್ಚಿಸಿತು. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಮಾರ್ಪಾಡು ಹಾಗೂ ಸೂಚನೆಗಳನ್ನು ಸಭೆಯು ಸೂಚಿಸಿತು.** |
| | • **<u>ವಿಷಯ ಸಂಖ್ಯೆ 5:</u> 'ಸರ್ಕಾರದ ಆದೇಶದ ಮೇರೆಗೆ ವಿಶ್ವವಿದ್ಯಾಲಯದಲ್ಲಿ ಮಾಹಿತಿ ತಂತ್ರಜ್ಞಾನ ಬಳಕೆಯ ಅನುಷ್ಠಾನ'**ಕ್ಕೆ ಸಂಬಂಧಿಸಿದಂತೆ, ಹಿಂದಿನ ಪ್ರಶಾಸನ ಸಮಿತಿ ನಿರ್ಣಯಿಸಿದಂತೆ, ನಿಯಮಾನುಸಾರ ತಾತ್ಕಾಲಿಕ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳನ್ನು, ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಸೇವಾ ಸಂಸ್ಥೆಯ ಮೂಲಕ ವೇತನವನ್ನು ಪಾವತಿಸಲು ಸಭೆಯು ಅಭಿಪ್ರಾಯಪಟ್ಟಿತು. ಈ ವಿಷಯಕ್ಕೆ ಅಧ್ಯಕ್ಷರು ಅಂಗೀಕಾರ ನೀಡಿದರು. | |

<table>
<tr>
<td></td>
<td colspan="2">

• <u>**ವಿಷಯ ಸಂಖ್ಯೆ 6:**</u> **'ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿಗಳಿಗೆ ಎಸ್.ಬಿ.ಐ. ವೈದ್ಯಕೀಯ ವಿಮೆಯನ್ನು ಒದಗಿಸುವ'** ವಿಚಾರಕ್ಕೆ ಸಂಬಂಧಿಸಿದಂತೆ, ಕುಲಪತಿಗಳು ಈ ವಿಷಯವನ್ನು ಪುನಃ ಪರಿಶೀಲಿಸಿ ವಿಸ್ತೃತವಾದ ವಿವರವನ್ನು ಮುಂದಿನ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿದರು.

• <u>**ವಿಷಯ ಸಂಖ್ಯೆ 10:**</u> **'ವಿಶ್ವವಿದ್ಯಾಲಯದಲ್ಲಿ ಶಿಕ್ಷಾ ನಿಕಾಯವನ್ನು ಪ್ರಾರಂಭಿಸುವುದ'ಕ್ಕೆ** ಸಂಬಂಧಿಸಿದಂತೆ, ಸಮಿತಿಯ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸದಸ್ಯರು ಸೂಚಿಸಿದರು. ವಿಶ್ವವಿದ್ಯಾಲಯದ ಮೈಸೂರಿನ ಆವರಣದಲ್ಲಿ ಸ್ಥಳಾವಕಾಶವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು. ಮಾನ್ಯ ಕುಲಪತಿಗಳಿಗೆ ಅಂತಿಮ ನಿರ್ಣಯದ ಅಧಿಕಾರವನ್ನು ಸಭೆ ನೀಡಿತು.

• <u>**ವಿಷಯ ಸಂಖ್ಯೆ 23:**</u> **'ಶಾಂಡಿಲ್ಯ ಇನ್ಫೋಟೆಕ್ ಪ್ರೈ.ಲಿ. ಸಂಸ್ಥೆಯಿಂದ ಹಣಕಾಸು ವಿಭಾಗಕ್ಕೆ ತಜ್ಞ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದ'ಕ್ಕೆ** ಸಂಬಂಧಿಸಿದಂತೆ, ಟಿಪ್ಪಣಿಯಲ್ಲಿರುವ **'ನಮ್ಮ ವಿಶ್ವವಿದ್ಯಾಲಯದ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸುತ್ತಿರುವ'** ಎಂಬುದನ್ನು **'ನಮ್ಮ ವಿಶ್ವವಿದ್ಯಾಲಯದ ಆಂತರಿಕ ಲೆಕ್ಕ ತಪಾಸಣೆ ಕಾರ್ಯ ನಿರ್ವಹಿಸುತ್ತಿರುವ'** ಎಂದು ತಿದ್ದುಪಡಿ ಮಾಡಿಕೊಳ್ಳಲು ಸದಸ್ಯರು ಸೂಚಿಸಿದರು.

• <u>**ವಿಷಯ ಸಂಖ್ಯೆ 25:**</u> **'NAAC ಸಂಸ್ಥೆಯಿಂದ ಎಲ್ಲ ಕಾಲೇಜುಗಳ ಪ್ರಾಚಾರ್ಯರು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗೆ ಒಂದು ಕಾರ್ಯಾಗಾರವನ್ನು ನಡೆಸುವ ಬಗೆಗೆ'** ಮತ್ತು <u>**ವಿಷಯ ಸಂಖ್ಯೆ 26:**</u> **'ಆಡಳಿತಾತ್ಮಕ ಕಾರ್ಯಗಳ ನಿರ್ವಹಣಾ ದೃಷ್ಟಿಯಿಂದ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಬಗೆಗೆ'** ಸಂಬಂಧಿಸಿದಂತೆ, ಪ್ರಗತಿಯ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿತು.

• <u>**ವಿಷಯ ಸಂಖ್ಯೆ 27:**</u> **'ಡೀನರು/ಅಧ್ಯಯನಾಂಗದ ನಿರ್ದೇಶಕರು/ಪರೀಕ್ಷಾಂಗ ನಿಯಂತ್ರಕರು/ಯೋಜನಾ ನಿರ್ದೇಶಕರು/ ಉಪನಿರ್ದೇಶಕರು(ಪ್ರಸಾರಾಂಗ) –ಇವರ ಮೊಬೈಲ್ ಬಿಲ್‌ನ ಮೊತ್ತವನ್ನು ಪಾವತಿಸುವುದ'ಕ್ಕೆ** ಸಂಬಂಧಿಸಿದಂತೆ ಯಾರಿಗೆ ಮೊಬೈಲ್ ಸಿಮ್ ಕಾರ್ಡ್ ಹಂಚುವುದು ಎಂಬುದನ್ನು ನಿಗದಿಪಡಿಸಿ, ಮುಂದಿನ ಸಭೆಯಲ್ಲಿ ಮಂಡಿಸುವುದು ಎಂದು ಮಾನ್ಯ ಅಧ್ಯಕ್ಷರು ಸೂಚಿಸಿದರು.

<u>**ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪವಾದ ಇತರ ವಿಷಯಗಳು:**</u>

• <u>**ವಿಷಯ ಸಂಖ್ಯೆ 2:**</u> **'ವಿಶ್ವವಿದ್ಯಾಲಯದ ಸಂಸ್ಕೃತ ಸಂಜೆ ಕಾಲೇಜನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುವುದ'ಕ್ಕೆ** ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳು ಘಟಕ ಕಾಲೇಜಿನ ಆವರಣದಲ್ಲಿ ಅಥವಾ ಸರ್ಕಾರಿ ಶಾಲಾ–ಕಾಲೇಜುಗಳ ಆವರಣಗಳಲ್ಲಿ ಸ್ಥಳಾವಕಾಶ ಲಭ್ಯವಿರುವ ಬಗೆಗೆ ಪರಿಶೀಲನೆ ನಡೆಸಿ, ಅವಶ್ಯಕತೆಗೆ ಅನುಗುಣವಾಗಿ ಮುಂದೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದೆಂದು ಸಭೆಯು ಅಭಿಪ್ರಾಯಪಟ್ಟು, ಮುಂದಿನ ಕ್ರಮವಹಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಿತು.

• <u>**ವಿಷಯ ಸಂಖ್ಯೆ 4:**</u> **'ವಿಶ್ವವಿದ್ಯಾಲಯದ ಅಧೀನವಾದ ಕಾಲೇಜುಗಳ ಅಧ್ಯಾಪಕರಿಗೆ ಹಾಗೂ ನಿರ್ದೇಶನಾಲಯದ ಅಧೀನವಾದ ಪಾಠಶಾಲಾ ಶಿಕ್ಷಕರಿಗೆ ತರಬೇತಿ ಶಿಬಿರಗಳನ್ನು ನಡೆಸುವುದ'ಕ್ಕೆ** ಸಂಬಂಧಿಸಿದಂತೆ, ಮುಂದಿನ ಸಭೆಯಲ್ಲಿ ವಿಸ್ತೃತ ಪ್ರಸ್ತಾವನೆಯನ್ನು ಮಂಡಿಸಲು ಸಭೆಯು ಸೂಚಿಸಿತು.

• <u>**ವಿಷಯ ಸಂಖ್ಯೆ 5:**</u> **'ವಿಶ್ವವಿದ್ಯಾಲಯದ ಬೆಂಗಳೂರು ಆಡಳಿತ ಕಛೇರಿಯ ಜಮೀನಿನ ಹಸ್ತಾಂತರದ ಬಗೆಗೆ ಹಾಗೂ ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಉದ್ಯಾನವನವನ್ನು ನಿರ್ಮಿಸುವುದ'ಕ್ಕೆ** ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಜಮೀನಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಬಿ.ಬಿ.ಎಂ.ಪಿ. ಅಥವಾ ಯಾವುದೇ ಸರ್ಕಾರೀ ಸಂಸ್ಥೆಗಳಿಗೆ ಕಟ್ಟಬೇಕಾದ ತೆರಿಗೆ ಮತ್ತು ಇತ್ಯಾದಿಗಳನ್ನು ಕಾಲಕಾಲಕ್ಕೆ ನಿರ್ಧರಿಸಿ ಕುಲಪತಿಗಳು ಕ್ರಮತೆಗೆದುಕೊಳ್ಳಬಹುದೆಂದು ಸಭೆಯು ನಿರ್ಧರಿಸಿತು.

• <u>**ವಿಷಯ ಸಂಖ್ಯೆ 7:**</u> **'2015–16ನೇ ಸಾಲಿನಲ್ಲಿ ಸಂಸ್ಕೃತೋತ್ಸವ ಹಾಗೂ ರೂಪಕೋತ್ಸವ ನಡೆಸುವುದ'ಕ್ಕೆ** ಸಂಬಂಧಿಸಿದಂತೆ, ಅಂದಾಜು ಪಟ್ಟಿಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿತು.

</td>
</tr>
<tr>
<td>ವಿಷಯ 02</td>
<td>

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 4ನೇ ದೀಕ್ಷಾಂತ ಘಟಿಕೋತ್ಸವದಲ್ಲಿ ಮೂವರು ವಿದ್ವಾಂಸರಿಗೆ ಗೌರವ ಡಿ.ಲಿಟ್ ನೀಡುವ ಬಗೆಗೆ.**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 11ನೇ ಸಾಮಾನ್ಯ ಸಭೆಯಲ್ಲಿ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಇಡಿ 398 ಯುಆರ್‌ಸಿ 2014(3); ದಿನಾಂಕ: 19.02.2015ರ ಅನ್ವಯ 'ಗೌರವ ಡಾಕ್ಟರೇಟ್' ಪದವಿ ಪ್ರದಾನಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ನಿರ್ಣಯಿಸಲಾಗಿದೆ:

• ನಿವೃತ್ತ ಕುಲಪತಿಗಳ/ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ/ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಶಿಕ್ಷಣತಜ್ಞರ ಸಮಿತಿಯನ್ನು ರಚಿಸುವುದು.

• ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದ ಕರಡು ಪಟ್ಟಿಯನ್ನು ಮೇಲೆ ಕಾಣಿಸಿದ ತಜ್ಞರ ಸಮಿತಿಯ ಮುಂದೆ ಮಂಡಿಸಿ ಅಂತಿಮ ಮೂರು ಜನಕ್ಕೆ ಸೀಮಿತಪಟ್ಟ ಪಟ್ಟಿಯನ್ನು ಪಡೆದು, ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸುವುದು.

• ಕುಲಾಧಿಪತಿಗಳ ಅಂತಿಮ ತೀರ್ಮಾನದಂತೆ ಗೌರವ ಡಾಕ್ಟರೇಟ್

</td>
<td>

**ಈ ವಿಷಯದ ಬಗ್ಗೆ ಸದಸ್ಯರು ಚರ್ಚೆ ನಡೆಸಿದರು. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ (ಕೇಂದ್ರೀಯ ವಿಶ್ವವಿದ್ಯಾಲಯ)ದ ನಿವೃತ್ತ ಕುಲಪತಿಗಳಾದ ಪ್ರೊ. ಡಿ. ಪ್ರಹ್ಲಾದಾಚಾರ್ಯ ಅವರ ಅಧ್ಯಕ್ಷತೆಯಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಪ್ರೊ. ಹೆಚ್.ಪಿ. ದೇವಕಿ ಅವರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಸಭೆಯು ಅನುಮೋದನೆ ನೀಡಿತು.**

**ಗೌರವ ಡಿ.ಲಿಟ್ ನೀಡಲು ಕೆಳಕಂಡ ವಿದ್ವಾಂಸರ ಹೆಸರುಗಳನ್ನು ಸದಸ್ಯರು ಸೂಚಿಸಿದರು:**

**1. ಕವಿ ಪಂಡರೀನಾಥಾಚಾರ್ಯ ಗಲಗಲಿ, ಹುಬ್ಬಳ್ಳಿ**<br>
**2. ಶ್ರೀಮತಿ ಲಲಿತಾಂಬ ಚಂದ್ರಶೇಖರ್**<br>
**3. ಶ್ರೀ ಕೆ.ಎಸ್.ಎಲ್. ಸ್ವಾಮಿ, ಬೆಂಗಳೂರು**<br>
**4. ಡಾ. ಎಂ.ಎ. ಲಕ್ಷ್ಮೀತಾತಾಚಾರ್, ಮೇಲುಕೋಟೆ**<br>
**5. ಡಾ. ಶಿವಾಚಾರ್ಯ ಸ್ವಾಮೀಜಿ, ತರಳಬಾಳು**<br>
**6. ಡಾ. ಎಸ್.ಆರ್. ಲೀಲಾ, ಬೆಂಗಳೂರು**

</td>
</tr>
</table>

| | | |
|---|---|---|
| | ಪದವಿಗಳ ಪ್ರದಾನಕ್ಕೆ ಆಯಾ ವಿಶ್ವವಿದ್ಯಾಲಯಗಳು ಸೂಕ್ತ ಕ್ರಮ ಕೈಗೊಳ್ಳುವುದು.<br>ಈ ಹಿನ್ನೆಲೆಯಲ್ಲಿ ಗೌರವ ಡಾಕ್ಟರೇಟ್ ಪ್ರದಾನಕ್ಕೆ ವಿದ್ವಾಂಸರ ಹೆಸರನ್ನು ಸೂಚಿಸಲು ಹಾಗೂ ಶಿಕ್ಷಣತಜ್ಞರ ಸಮಿತಿಯನ್ನು ರಚಿಸಲು ಅನುಮೋದನೆಗಾಗಿ ಮಂಡಿಸಿದೆ. | **7. ಕೆಳದಿ ಗುಂಡಾ ಜೋಯಿಸ್, ಕೆಳದಿ**<br>**8. ವಿದ್ವಾನ್ ಸದಾಶಿವಶಾಸ್ತ್ರೀಗಳು**<br>**9. ಪ್ರೊ. ಎನ್.ಟಿ. ಶ್ರೀನಿವಾಸ ಅಯ್ಯಂಗಾರ್, ಬೆಂಗಳೂರು**<br>**10. ಶ್ರೀ ಸಿದ್ದೇಶ್ವರ ಸ್ವಾಮೀಜಿ, ಬಿಜಾಪುರ**<br>**11. ಪ್ರೊ. ಐ.ಜಿ. ಸನದಿ, ಧಾರವಾಡ**<br>**12. ಮಹಾಮಹೋಪಾಧ್ಯಾಯ ವೆಂಕಟನಾಥನ್, ಮೈಸೂರು**<br>**13. ಬೊಂತೇ ಸ್ವಾಮೀಜಿ**<br>**ಈ ಪಟ್ಟಿಯನ್ನು ಶಿಕ್ಷಣತಜ್ಞರ ಸಮಿತಿಗೆ ಸಲ್ಲಿಸಿ, ಸಮಿತಿಯು ಅಂತಿಮಗೊಳಿಸುವ ಹೆಸರುಗಳನ್ನು ಕುಲಾಧಿಪತಿಗಳಿಗೆ ಸಲ್ಲಿಸಿ ಅನುಮೋದನೆ ಪಡೆಯಲು ಸಭೆಯು ಸೂಚಿಸಿತು.** |
| ವಿಷಯ 03 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದ ಸಮಾಲೋಚನೆಗಾಗಿ ತಜ್ಞ ಆರ್ಕಿಟೆಕ್ಟ್‌ರ ಸೇವೆ ಪಡೆಯುವ ಬಗೆಗೆ.**<br>ವಿಶ್ವವಿದ್ಯಾಲಯದ ಬೆಂಗಳೂರು ನಗರದ ಆವರಣದಲ್ಲಿ ಒಂದು ನೂತನ ಸುಸಜ್ಜಿತ ಕಟ್ಟಡವನ್ನು ನಿರ್ಮಿಸುವ ಸಂಬಂಧ ಸರ್ಕಾರದ ಇಲಾಖೆಗಳಿಗೆ ಸಲ್ಲಿಸಲು ಒಂದು ನೀಲನಕ್ಷೆಯನ್ನು ಸಿದ್ಧಪಡಿಸುವ ಮತ್ತು ಅದರ ಅಂದಾಜು ವೆಚ್ಚವನ್ನು ನಿರ್ಧರಿಸಬೇಕಾಗಿರುವ ಹಿನ್ನೆಲೆಯಲ್ಲಿ ಈ ಬಗೆಗೆ ಸಮಾಲೋಚಿಸಲು ಒಬ್ಬರು ಸೂಕ್ತ ತಜ್ಞ ಆರ್ಕಿಟೆಕ್ಟ್‌ರ ಸೇವೆಯನ್ನು ಪಡೆಯಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಈ ಬಗ್ಗೆ ಸಭೆಯು ದೀರ್ಘವಾಗಿ ಚರ್ಚಿಸಿ, ಅಂತಿಮವಾಗಿ ತಜ್ಞ ಆರ್ಕಿಟೆಕ್ಟ್‌ರ ಸೇವೆಯನ್ನು ಪಡೆಯುವ ಬಗೆಗೆ ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಿತು.** |
| ವಿಷಯ 04 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಥಾಪನೆಯಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಕರ್ನಾಟಕ ರಾಜ್ಯದ ಸ್ನಾತಕಪೂರ್ವ ಶಿಕ್ಷಣವನ್ನು ನಿರ್ವಹಿಸುತ್ತಿದ್ದು 2014–15ನೇ ಸಾಲಿನ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿ, ಫಲಿತಾಂಶ ಪ್ರಕಟಿಸಿದೆ. ಈ ಪರೀಕ್ಷೆಗಳಲ್ಲಿ ವೈಶಿಷ್ಟ್ಯ ಶ್ರೇಣಿಯೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲು ಮತ್ತು 2014–15ನೇ ಸಾಲಿನಲ್ಲಿ ನಿವೃತ್ತರಾದ ಸಂಸ್ಕೃತ ಪಾಠಶಾಲಾ ಶಿಕ್ಷಕರನ್ನು "ಸಂಸ್ಕೃತ ಸೇವಾ ಸನ್ಮಾನ"ದೊಂದಿಗೆ ಅಭಿನಂದಸಲು ಪ್ರತಿ ವರ್ಷದಂತೆ ಈ ವರ್ಷವೂ ಶಿಕ್ಷಕರ ಸದನದಲ್ಲಿ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ ಕಾರ್ಯಕ್ರಮವನ್ನು ಜುಲೈ ಕೊನೆಯ ವಾರದಲ್ಲಿ ನಡೆಸಲು ತೀರ್ಮಾನಿಸಿದ್ದು, ಈ ಕಾರ್ಯಕ್ರಮ ನಡೆಸಲು ಅಂದಾಜು ವೆಚ್ಚದ ಪಟ್ಟಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ವಿವರಗಳನ್ನು ಪರಿಶೀಲಿಸಿ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹವನ್ನು ನಡೆಸಲು ಒಪ್ಪಿಗೆಯನ್ನು ನೀಡಿತು. ಅದಕ್ಕೆ ಸಂಬಂಧಿಸಿದ ಅಂದಾಜು ವೆಚ್ಚಕ್ಕೂ ಅನುಮತಿ ನೀಡಿತು. ಶಿಕ್ಷಕರ ಸದನ ದೊರೆಯದಿದ್ದಲ್ಲಿ ಸೂಕ್ತವಾದ ಸ್ಥಳದಲ್ಲಿ ಆಯೋಜಿಸಲು ಸಭೆಯು ನಿರ್ಣಯಿಸಿತು.** |
| ವಿಷಯ 05 | **ಮಾನ್ಯ ಕುಲಪತಿಗಳಿಗೆ ನೂತನ ಕಾರನ್ನು ಖರೀದಿಸುವ ಬಗೆಗೆ.**<br>ಮಾನ್ಯ ಕುಲಪತಿಗಳ ಪ್ರಯಾಣಕ್ಕಾಗಿ 2010ರಲ್ಲಿ ಹುಂಡೈ ಸಂಸ್ಥೆಯ ವರ್ನಾ ಕಾರನ್ನು ಖರೀದಿಸಲಾಗಿತ್ತು. ಈ ಕಾರನ್ನು ಖರೀದಿಸಿ ಈಗಾಗಲೇ ಐದು ವರ್ಷಗಳು ಕಳೆಯುತ್ತಿದ್ದು, 1,60,000 ಕಿ.ಮೀ.ಗಳು ಚಲಿಸಿರುತ್ತದೆ. ಅಲ್ಲದೇ ಕಾರಿನ ಎ.ಸಿ. ಹಾಗೂ ಇನ್ನಿತರ ಬಿಡಿಭಾಗಗಳು ರಿಪೇರಿಗೆ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಕುಲಪತಿಗಳ ಬಳಕೆಗಾಗಿ ನೂತನ ಕಾರನ್ನು ಖರೀದಿಸಬೇಕಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಸದ್ಯ ಇರುವ ಕಾರು ಹಳೆಯದಾಗಿರುವುದರಿಂದ, ಕುಲಪತಿಗಳು ರಾಜ್ಯಾದ್ಯಂತ ಸಂಚರಿಸಬೇಕಾದ ಅಗತ್ಯತೆಯನ್ನು ಪರಿಗಣಿಸಿದ ಸಭೆಯು ನಿಯಮಾನುಸಾರ ನೂತನ ಕಾರನ್ನು ಖರೀದಿಸುವುದಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವವಾದ ಇತರ ವಿಷಯಗಳು:** | | |
| ವಿಷಯ 01 | **'ಸಂಸ್ಕೃತ ಗ್ರಂಥ ಪುರಸ್ಕಾರ' ನೀಡುವ ಬಗೆಗೆ.**<br>ಸಂಸ್ಕೃತದ ವಿವಿಧ ಪ್ರಕಾರಗಳ ಸಾಹಿತ್ಯ ಗ್ರಂಥಗಳಿಗೆ ಸಂಬಂಧಿಸಿದಂತೆ ಲೇಖಕರಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕಳೆದ ನಾಲ್ಕು 'ಪ್ರೊ. ಎಂ. ಹಿರಿಯಣ್ಣ ಗ್ರಂಥ ಪುರಸ್ಕಾರ'ವನ್ನು ನೀಡುತ್ತಿದೆ. ದಿನಾಂಕ: | **'ಗ್ರಂಥ ಪುರಸ್ಕಾರ ಆಯ್ಕೆ ಸಮಿತಿ' ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಪ್ರೊ. ಎಂ. ಹಿರಿಯಣ್ಣ ಅವರ ಹೆಸರನ್ನೂ ಒಳಗೊಂಡಂತೆ ಇನ್ನೂ ಅನೇಕ ಹಿರಿಯ ವಿದ್ವಾಂಸರ ಹೆಸರಿನಲ್ಲಿ ಗ್ರಂಥ ಪುರಸ್ಕಾರವನ್ನು ನೀಡಲು** |

| | | |
|---|---|---|
| | 24.02.2015ರಂದು ನಡೆದ 'ಗ್ರಂಥಪುರಸ್ಕಾರ 2014' ಪೂರ್ವಭಾವಿ ಸಭೆಯಲ್ಲಿ 'ಗ್ರಂಥ ಪುರಸ್ಕಾರ' ಎಂಬ ಹೆಸರಿನಲ್ಲಿ ಪುರಸ್ಕಾರವನ್ನು ನೀಡಲು ತೀರ್ಮಾನಿಸಿದೆ. ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ವಿದುಷಿ ಅನುಪಮಾ ಬಿ. ಅವರು ಪತ್ರವನ್ನು ನೀಡಿ 'ಪ್ರೊ. ಎಂ. ಹಿರಿಯಣ್ಣ ಗ್ರಂಥ ಪುರಸ್ಕಾರ' ಹೆಸರಿನಲ್ಲಿಯೇ ಗ್ರಂಥಪುರಸ್ಕಾರವನ್ನು ಮುಂದುವರೆಸಬೇಕೆಂದು ಮನವಿ ಮಾಡಿದ್ದಾರೆ. ಚರ್ಚಿಸಲು ಸಭೆಯಲ್ಲಿ ಮಂಡಿಸಿದೆ. | ನಿರ್ಧರಿಸಲಾಗಿದೆ ಎಂಬ ಅಂಶವನ್ನು ಕುಲಸಚಿವರು ಸಭೆಗೆ ತಿಳಿಸಿದರು. ಈ ಅಂಶವನ್ನು ಪರಿಶೀಲಿಸಿದ ಸಭೆಯು ಆಯ್ಕೆ ಸಮಿತಿಯ ನಿರ್ಧಾರದಂತೆ ಮುಂದುವರೆಯುವುದು ಉಚಿತವೆಂದು ಅಭಿಪ್ರಾಯ ಸೂಚಿಸಿತು. |
| ವಿಷಯ 02 | **ವೇಣುಗೋಪಾಲ ಹೆರೂರ ಅವರ 'ಇಪ್ಪತ್ತೊಂದು ಜೊತೆ ಏಕಕಾಲಿಕ ಸಮೀಕರಣಗಳು' ಪುಸ್ತಕವನ್ನು ಮುದ್ರಿಸುವ ಬಗೆಗೆ.**<br>ವೇಣುಗೋಪಾಲ ಹೆರೂರ ಅವರು 'ಇಪ್ಪತ್ತೊಂದು ಜೊತೆ ಏಕಕಾಲಿಕ ಸಮೀಕರಣಗಳು' ಎಂಬ ಪುಸ್ತಕವನ್ನು ರಚಿಸಿದ್ದು, ಈ ಪುಸ್ತಕವು 100 ಪುಟಗಳನ್ನು ಒಳಗೊಂಡಿದೆ. ಪ್ರಸಾರಾಂಗದ ವತಿಯಿಂದ ಈ ಪುಸ್ತಕವನ್ನು ಮುದ್ರಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ನಿಯಮಾನುಸಾರ ಪುಸ್ತಕವನ್ನು ಮುದ್ರಿಸಲು ಸಭೆಯು ಅನುಮತಿ ನೀಡಿತು. |
| ವಿಷಯ 03 | **ಅನುದಾನಿತ ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳ ಅಧ್ಯಾಪಕರ ಉಪವೇತನ ಹುಂಡಿಯನ್ನು ಮುದ್ರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಸಂಸ್ಕೃತ ಕಾಲೇಜುಗಳು/ ಪಾಠಶಾಲೆಗಳ ಅಧ್ಯಾಪಕರಿಗೆ ವೇತನವನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಉಪವೇತನ ಹುಂಡಿ (ನಮೂನೆ)ಗಳನ್ನು ಮುದ್ರಿಸಿ ನೀಡಬೇಕಾಗಿದೆ. ಉಪವೇತನ ಹುಂಡಿ ಮುದ್ರಣಕ್ಕೆ ಸಂಬಂಧಿಸಿದ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಪಾವತಿಸಿ, ಅನಂತರ ಅಧ್ಯಾಪಕರಿಗೆ ಒಂದು ಅರ್ಜಿಗೆ ರೂ. 2/–ರಂತೆ ಮಾರಾಟ ಮಾಡಲು ನಿರ್ಧರಿಸಲಾಗಿದೆ. ಈ ವಿಷಯಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | ನಿಯಮಾನುಸಾರ ವೇತನದ ಬಿಲ್ಲುಗಳನ್ನು ಮುದ್ರಿಸಲು ಸಭೆಯು ಅನುಮತಿ ನೀಡಿತು. |
| ವಿಷಯ 04 | **ಪ್ರಾಧಿಕಾರಗಳ ಸದಸ್ಯರಿಗೆ ಪ್ರಯಾಣಭತ್ಯೆಯನ್ನು ಪಾವತಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳಲ್ಲಿ ಭಾಗವಹಿಸುವ ಸದಸ್ಯರುಗಳಿಗೆ ಪ್ರಯಾಣಭತ್ಯೆಯನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ ಚರ್ಚೆಗಾಗಿ ಸಭೆಯಲ್ಲಿ ಮಂಡಿಸಿದೆ. | ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಯುಎ1/85/2005–2006; ದಿನಾಂಕ: 18.08.2012ರ ಆದೇಶವನ್ನು ಪರಿಶೀಲಿಸಿತು. ಈ ಆದೇಶದ ಆಧಾರದಲ್ಲಿ ಸಭೆಗಳಿಗೆ ಸ್ವಂತ ಕಾರು/ಟ್ಯಾಕ್ಸಿಗಳಲ್ಲಿ ಆಗಮಿಸುವ ಪ್ರಶಾಸನ ಸಮಿತಿ/ಪ್ರಶಿಕ್ಷಣ ಪರಿಷತ್/ ಹಣಕಾಸು ಸಮಿತಿ ಸದಸ್ಯರಿಗೆ ಪ್ರತಿ ಕಿ.ಮೀ.ಗೆ ರೂ. 8.00 ಪ್ರಯಾಣಭತ್ಯೆ ಪಾವತಿಸಲು (ಬೇರೆ ವೆಚ್ಚಗಳನ್ನು ಪರಿಗಣಿಸುವುದಿಲ್ಲ) ಸಭೆಯು ಒಪ್ಪಿಗೆ ನೀಡಿತು. ಸ್ವಂತ ಕಾರು ಬಳಸಿದಲ್ಲಿ ಸ್ವಯಂ ದೃಢೀಕರಣ ಮಾಡುವಂತೆ ಅಥವಾ ಟ್ಯಾಕ್ಸಿಯಲ್ಲಿ ಪ್ರಯಾಣಿಸಿದರೆ ಟ್ಯಾಕ್ಸಿ ಬಿಲ್‌ಅನ್ನು ಸಲ್ಲಿಸಲು ಸಭೆಯು ಸೂಚಿಸಿತು. ಉಳಿದಂತೆ, ಬಸ್ಸು/ರೈಲು/ವಿಮಾನ ಪ್ರಯಾಣ ಮಾಡುವ ಸದಸ್ಯರು ವಾಸ್ತವ ವೆಚ್ಚ ಮತ್ತು ಸ್ಥಳೀಯ ಆಟೋ ವೆಚ್ಚವನ್ನು ಪಡೆಯಲು ಸಭೆಯು ಅನುಮೋದನೆ ನೀಡಿತು.<br>ಸ್ಥಳೀಯ ಸದಸ್ಯರಿಗೆ ಒಂದು ದಿನದ ಟ್ಯಾಕ್ಸಿ ಬಾಡಿಗೆಯನ್ನು ಪಾವತಿಸಲು ಸಭೆಯು ಒಪ್ಪಿಗೆ ನೀಡಿತು. |
| ವಿಷಯ 05 | **ಉಪಸಮಿತಿ ಸಭೆಗಳ ಸಭಾಭತ್ಯೆಯನ್ನು ಪಾವತಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಉಪಸಮಿತಿ ಸಭೆಗಳಲ್ಲಿ ಭಾಗವಹಿಸುವ ಸದಸ್ಯರುಗಳಿಗೆ ನೀಡುವ ಸಭಾಭತ್ಯೆಯ ಮೊತ್ತವನ್ನು ನಿರ್ಧರಿಸಲು ಸಭೆಯ ಚರ್ಚೆಗಾಗಿ ಮಂಡಿಸಿದೆ. | ವಿಶ್ವವಿದ್ಯಾಲಯದ ಉಪಸಮಿತಿಗಳು, ಸಲಹಾ ಸಮಿತಿಗಳು ಹಾಗೂ ಪ್ರಾಧಿಕಾರಗಳ ಸದಸ್ಯರನ್ನು ಒಳಗೊಂಡ ಇತರ ಸಮಿತಿಗಳಲ್ಲಿ ಭಾಗವಹಿಸುವ ಸದಸ್ಯರುಗಳಿಗೆ ರೂ. 1000/– ಸಭಾಭತ್ಯೆಯನ್ನು ಪಾವತಿಸಲು ಸಭೆಯು ತೀರ್ಮಾನಿಸಿತು. |
| ವಿಷಯ 06 | **ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳು '16ನೇ ವಿಶ್ವ ಸಂಸ್ಕೃತ ಸಮ್ಮೇಳನ'ದಲ್ಲಿ ಭಾಗವಹಿಸಲು ಅನುಮತಿ ನೀಡಿರುವ ಬಗೆಗೆ.**<br>16ನೇ ವಿಶ್ವ ಸಂಸ್ಕೃತ ಸಮ್ಮೇಳನವು ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ದಿನಾಂಕ: 26.06.2015 ರಿಂದ 02.07.2015ರ ವರೆಗೆ ನಡೆಯುತ್ತಿದ್ದು, ಈ ಸಮ್ಮೇಳನದಲ್ಲಿ ಭಾಗವಹಿಸಿ, ಪ್ರಬಂಧ ಮಂಡಿಸಲು ವಿಶ್ವವಿದ್ಯಾಲಯದ | ಸಭೆಯು ಎಲ್ಲ ಅಂಶಗಳನ್ನು ಪರಿಶೀಲಿಸಿ, ಅನುಮತಿ ನೀಡಿರುವುದನ್ನು ಸ್ಥಿರೀಕರಣಗೊಳಿಸಿತು.<br>ಸಹಪ್ರಾಧ್ಯಾಪಕರಾದ ಡಾ. ಬಿ.ವಿ. ವೆಂಕಟರಮಣ ಅವರಿಗೆ ಕೇಂದ್ರ ಸರ್ಕಾರವು ಸಹಾಯಾನುದಾನ ನೀಡಿರುವುದನ್ನು ಸಭೆಯ ಅವಗಾಹನೆಗೆ ತರಲಾಯಿತು. ಹಾಗೆಯೇ, |

| | | |
|---|---|---|
| | ಆರು ಬೋಧಕ ಸಿಬ್ಬಂದಿಗಳಿಗೆ ಅನುಮತಿಯನ್ನು ನೀಡಲಾಗಿತ್ತು. ಈ ಸಂಬಂಧ ಪ್ರಶಾಸನ ಸಮಿತಿ ಸದಸ್ಯರಿಗೆ ಮಾನ್ಯ ಕುಲಪತಿಗಳು ಪತ್ರವನ್ನು ಬರೆದಿದ್ದರು. ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | **ವಿಶ್ವವಿದ್ಯಾಲಯದ ನಿಯಮಗಳನ್ನು ಪರಿಶೀಲಿಸಿ, ಅದಕ್ಕೆ ಅನುಗುಣವಾಗಿ ಉಳಿದ ಬೋಧಕ ಸಿಬ್ಬಂದಿಗಳ ಪ್ರಯಾಣವೆಚ್ಚಕ್ಕೆ ಸಹಾಯಾನುದಾನ ನೀಡುವುದಕ್ಕೆ ಕುಲಪತಿಗಳು ಕ್ರಮವಹಿಸಲು ಅಧಿಕಾರವನ್ನು ನೀಡಿತು.** |

**ಪ್ರೊ. ಶ್ರೀನಿವಾಸ ವರಖೇಡಿ**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು